ಕರ್ನಾಟಕ ಸರ್ಕಾರ

**ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.**

(ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು)

**E-Mail :- dudc_burban@yahoo.com Phone No-08022211372/352**

ಸಂಖ್ಯೆ:ಜಿನಕೋ/ಸಿ(2)/ತಾ.ಶಾ/EO-711728/2025-26 23-05-2025

## :: ಅಧಿಕೃತ ಜ್ಞಾಪನ ::

**ವಿಷಯ:-** ಚಿಕ್ಕಬಾಣವಾರ ಪುರಸಭೆಯ 2025-26ನೇ ಸಾಲಿನ ಪುರಸಭಾ ನಿಧಿಯಲ್ಲಿ ಕಲ್ಯಾಣ ಕಾರ್ಯಕ್ರಮಗಳಾದ ಶೇ.24.10, ಶೇ.7.5 ಮತ್ತು ಶೇ.5ರ ಯೋಜನೆಗಳಿಗೆ ಕ್ರಿಯಾಯೋಜನೆ ತಯಾರಿಸಿ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸುತ್ತಿರುವುದರ ಬಗ್ಗೆ.

**ಉಲ್ಲೇಖ:-** 1. ಮಾನ್ಯ ಆಡಳಿತಾಧಿಕಾರಿಗಳವರ ಅಧ್ಯಕ್ಷತೆಯಲ್ಲಿ ದಿನಾಂಕ:10.03.2025 ರಂದು ನಡೆದ ಸಾಮಾನ್ಯ ಸಭೆಯ ಬಜೆಟ್ ಠರಾವು ಸಂಖ್ಯೆ:03ರ ರೀತ್ಯಾ.

2. ಮಾನ್ಯ ಆಡಳಿತಾಧಿಕಾರಿಗಳವರ ಅಧ್ಯಕ್ಷತೆಯಲ್ಲಿ ದಿನಾಂಕ:05.04.2025 ರಂದು ನಡೆದ ಸಾಮಾನ್ಯ ಸಭೆಯ ಠರಾವು ಸಂಖ್ಯೆ:06ರೀತ್ಯಾ.

3. ಮುಖ್ಯಾಧಿಕಾರಿ ಪುರಸಭೆ ಚಿಕ್ಕಬಾಣವಾರ ರವರ ಪತ್ರ ಸಂಖ್ಯೆ:ಪುಸಹು/ತಾಶಾ/ಸಿಆರ್/02/2025-26 ದಿನಾಂಕ:13/05/2025.

****

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ಮತ್ತು (2)ರ ಅನ್ವಯದಂತೆ 2025-26ನೇ ಸಾಲಿನ ಪುರಸಭಾ ಅನುದಾನದಡಿ ರೂ:24.50ಲಕ್ಷಗಳು ನಿಗಧಿಯಾಗಿದ್ದು ಅದರಂತೆ ಕ್ರಿಯಾಯೋಜನೆಯನ್ನು ಮಾನ್ಯ ಆಡಳಿತಾಧಿಕಾರಿಗಳು ಅನುಮೋದಿಸಿರುತ್ತಾರೆ. ಅದರಲ್ಲಿ ಕಲ್ಯಾಣ ಕಾರ್ಯಕ್ರಮಗಳಾದ ಶೇ.24.10, ಶೇ.7.25 ಮತ್ತು ಶೇ.5ರ ಯೋಜನೆಗೆ ಒಟ್ಟು ರೂ.24.50ಲಕ್ಷ ಗಳನ್ನು ಮೀಸಲಿರಿಸಿರುತ್ತಾರೆ. ಸದರಿ ಅನುದಾನದಡಿ ಶೇ.24.10 ಮತ್ತು ಶೇ.7.25 ಯೋಜನೆಗೆ ಸರ್ಕಾರದ ಮಾರ್ಗಸೂಚಿಯಂತೆ ಶೇ.20ರಷ್ಟು ಅನುದಾನವನ್ನು ಪೌರಕಾರ್ಮಿಕರಿಗೆ ಕಾರ್ಯಕ್ರಮವನ್ನು ರೂಪಿಸಲಾಗಿರುತ್ತದೆ. ಉಳಿದಂತೆ ಶೇ.7.25ಹಾಗೂ ಶೇ.5ರ ಯೋಜನೆಗೆ ಸರ್ಕಾರದ ಮಾರ್ಗ ಸೂಚಿಯಂತೆ ಹಾಗೂ ಮಾನ್ಯ ಆಡಳಿತಾಧಿಕಾರಿಗಳವರ ಕೌನ್ಸಿಲ್ ಸಭೆಯ ನಿರ್ಣಯದಂತೆ ಕ್ರಿಯಾಯೋಜನೆಯ ಪ್ರಸ್ತಾವನೆಯನ್ನು ತಯಾರಿಸಲಾಗಿರುತ್ತದೆ. ಸದರಿ ಕ್ರಿಯಾ ಯೋಜನೆಯ ಪ್ರತಿಯನ್ನು ಲಗತ್ತಿಸುತ್ತಾ ಕ್ರಿಯಾ ಯೋಜನೆಯ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಮುಖ್ಯಾಧಿಕಾರಿ ಪುರಸಭೆ ಚಿಕ್ಕಬಾಣವಾರ ರವರು ಕ್ರಿಯಾ ಯೋಜನೆಯ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ

**2025-26ನೇ ಸಾಲಿನ ಪುರಸಭಾ ನಿಧಿ ಅನುದಾನದ ಕ್ರಿಯಾ ಯೋಜನೆ ವಿವರ**

**2025-26ನೇ ಸಾಲಿನ 24.10ರಲ್ಲಿ ಪುರಸಭಾ ನಿಧಿಯಲ್ಲಿ ಹಂಚಿಕೆಯಾಗಿರುವ ಅನುದಾನದ ಒಟ್ಟು ಮೊತ್ತ ರೂ 16.00ಲಕ್ಷ**

| ಕ್ರ.ಸಂ | ಕ್ರಿಯಾಯೋಜನೆ ವಿವರ | ಉಳಿಕೆ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 1 | ಎಸ್.ಸಿ.ಎಸ್.ಪಿ ಯೋಜನೆಗೆ ಮೀಸರಿಸಿರುವ ಒಟ್ಟು ಮೊತ್ತ (ಶೇ.17.15) | 11.38 ಲಕ್ಷ |
| 2 | ಟಿ.ಎಸ್.ಪಿ ಯೋಜನೆಗೆ ಮೀಸರಿಸಿರುವ ಒಟ್ಟು ಮೊತ್ತ (ಶೇ.6.95) | 4.62 ಲಕ್ಷ |
| 3 | ಒಟ್ಟು ಮೊತ್ತ | 16.00 ಲಕ್ಷ |

**ಶೇ 24.10 (ಶೇ.17.15) ಎಸ್.ಸಿ.ಎಸ್.ಪಿ ಯೋಜನೆ**

| ಕ್ರ.ಸಂ | ಕ್ರಿಯಾಯೋಜನೆ ವಿವರ | ಉಳಿಕೆ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 1 | ಮೀಸರಿಸಿರುವ ಒಟ್ಟು ಮೊತ್ತ | 11.38 ಲಕ್ಷ |
| 2 | ಪೌರಕಾರ್ಮಿಕರಿಗೆ ಮೀಸಲಿರಿಸಿರುವ ಶೇ.20 ಮೊತ್ತ | 2.27 ಲಕ್ಷ |
| 3 | ವ್ಯಕ್ತಿ ಸಂಬಂಧಿತ ಕಾರ್ಯಕ್ರಮಗಳಿಗೆ ಮೀಸಲಿರಿಸಿರುವ ಶೇ.40 ಮೊತ್ತ | 3.64 ಲಕ್ಷ |
| 4 | ಸಮುದಾಯ ಸಂಬಂಧಿತ ಕಾರ್ಯಕ್ರಮಗಳಿಗೆ ಮೀಸಲಿರಿಸಿರುವ ಶೇ.60 | 5.47 ಲಕ್ಷ |

ಲಕ್ಷಗಳು.

| ಕ್ರ.ಸಂ | ಕಾರ್ಯಕ್ರಮಗಳ ವಿವರ | ರೂ ಮೊತ್ತ (ಲಕ್ಷಗಳಲ್ಲಿ) |
|---|---|---|
| 1 | ಚಿಕ್ಕಬಾಣಾವರ ಪುರಸಭಾ ವ್ಯಾಪ್ತಿಯ ಶಿವಕುಮಾರಸ್ವಾಮಿಜಿ ರಸ್ತೆಯಲ್ಲಿ ಭೂ ವಿಜ್ಞಾನಿಗಳು ತೋರಿಸುವ ಸ್ಥಳದಲ್ಲಿ ಕೊಳವೆ ಬಾವಿ ಕೊರೆಯುವ ಕಾಮಗಾರಿ. | 3.00 |
| | ಒಟ್ಟು ಮೊತ್ತ | **3.00** |

**VI. 2025-26ನೇ ಸಾಲಿನ ಪುರಸಭಾ ನಿಧಿಯಲ್ಲಿ ದಿವ್ಯಾಂಗಚೇತನರ ಕಲಾಣ ಕಾರ್ಯಕ್ರಮಗಳಿಗೆ (ಶೇ.5%) ಮೀಸಲಿರಿಸಿರುವುದರಲ್ಲಿ ಒಟ್ಟು ರೂ.3.50 ಲಕ್ಷಗಳ ಕ್ರಿಯಾಯೋಜನೆ.**

| | | |
|---|---|---|
| ಅ | ಮೀಸರಿಸಿರುವ ಒಟ್ಟು ಮೊತ್ತ | **3.50 ಲಕ್ಷ** |
| ಆ | ವ್ಯಕ್ತಿ ಸಂಬಂಧಿತ ಕಾರ್ಯಕ್ರಮಗಳಿಗೆ ಮೀಸಲಿರಿಸಿರುವ ಶೇ.40 ಮೊತ್ತ | **1.75 ಲಕ್ಷ** |
| ಇ | ಸಮುದಾಯ ಸಂಬಂಧಿತ ಕಾರ್ಯಕ್ರಮಗಳಿಗೆ ಮೀಸಲಿರಿಸಿರುವ ಶೇ.60 ಮೊತ್ತ. | **1.75 ಲಕ್ಷ** |

**IV. ಶೇ.5ರ ಅಡಿ ಹಂಚಿಕೆಯಿಂದ ಅನುದಾನದ ಮೊತ್ತ ರೂ.3.50 ಲಕ್ಷಗಳು**
**1) ಅನುದಾನದ ಶೇ.50+50 ರಷ್ಟು ವ್ಯಕ್ತಿ ಸಂಬಂಧಿತ ಹಾಗೂ ಸಮುದಾಯ ಸಂಬಂಧಿತ ಅನುಕೂಲತೆಗಳ ಹಂಚಿಕೆ ಮೊತ್ತ 3.50 ಲಕ್ಷಗಳು.**

| ಕ್ರ.ಸಂ | ಕಾರ್ಯಕ್ರಮಗಳ ವಿವರ | ರೂ ಮೊತ್ತ (ಲಕ್ಷಗಳಲ್ಲಿ) |
|---|---|---|
| 1 | ಅನುದಾನ ಲಭ್ಯತೆಯು ಅಲ್ಪ ಪ್ರಮಾಣದಲ್ಲಿ ಇರುವುದರಿಂದ ವ್ಯಕ್ತಿ ಸಂಬಂಧಿತ ಕಾರ್ಯಕ್ರಮಗಳ ಅನುದಾನದನ್ನು ಹಾಗೂ ಸಮುದಾಯ ಸಂಬಂಧಿತ ಅನುಕೂಲತೆಯ ಅನುದಾನವನ್ನು ವಿಕಲಚೇತನರಿಗೆ ವಿವಿಧ ಪರಿಕರಗಳನ್ನು ಹಾಗೂ ಸಣ್ಣ ಉದ್ದಿಮೆ ಆರಂಭಿಸಲು ಇಚ್ಛಿಸುವವರಿಗೆ ಸ್ವಯಂ ಉದ್ಯೋಗಕ್ಕಾಗಿ ಸಹಾಯಧನ ನೀಡುವುದು ಹಾಗೂ ತ್ರಿಚಕ್ರ ವಾಹನ ಒದಗಿಸುವುದು. | 3.50 |
| | ಒಟ್ಟು ಮೊತ್ತ | **3.50** |

ಮುಂದುವರೆದು ಮುಖ್ಯಾಧಿಕಾರಿ, ಪುರಸಭೆ, ಚಿಕ್ಕಬಾಣವಾರ 2025-26ನೇ ಸಾಲಿನ ಪುರಸಭಾ ನಿಧಿಯಲ್ಲಿ ಕಲಾಣ ಕಾರ್ಯಕ್ರಮಗಳಾದ ಶೇ.24.10, ಶೇ.7.5 ಮತ್ತು ಶೇ.5ರ ಯೋಜನೆಗಳಿಗೆ ಕ್ರಿಯಾಯೋಜನೆ ತಯಾರಿಸಿ ಅನುಮೋದನೆಗೆ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಮೋದನೆ ನೀಡಿದೆ.

JAGADEESHA G, BURDC-
DC(JG), O/o DEPUTY
COMMISSIONER-
BENGALURU URBAN
DEPUTY COMMISSIONER
23-05-2025

ರವರಿಗೆ,

ಮುಖ್ಯಾಧಿಕಾರಿ,
ಪುರಸಭೆ, ಚಂದಾಪುರ.

**:: ಷರತ್ತುಗಳು ::**

1. ಕಾಮಗಾರಿಗಳನ್ನು ಅಲ್ಪಾವಧಿ ಟೆಂಡರ್ ಕರೆಯಲು ಅನುಮತಿ ನೀಡಿದೆ.
2. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ ಮತ್ತು ನಿಯಮಗಳನ್ನು ಕಡ್ಡಾಯವಾಗಿ

ಪಾಲಿಸತಕ್ಕದ್ದು.

3. ಕಾಮಗಾರಿಗಳನ್ನು ಶೀಘ್ರವಾಗಿ ಹಾಗೂ ಗುಣಮಟ್ಟದೊಂದಿಗೆ ನಿರ್ವಹಿಸಲು ಬಿಡಿ ಬಿಡಿಯಾಗಿ ಟೆಂಡರ್ ಕರೆಯದೇ ಪ್ಯಾಕೇಜ್ ರೀತಿಯಲ್ಲಿ ಟೆಂಡರ್ ಕರೆಯುವುದು.

4. ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆ ಪಡೆಯತಕ್ಕದ್ದು.

5. ಸದರಿ ಕಾಮಗಾರಿಗಳ ನಿರ್ವಹಣೆಗೆ ತಗಲುವ ಹೆಚ್ಚುವರಿ ಅನುದಾನವನ್ನು ಸ್ವಂತ ನಿಧಿಯಿಂದ ನಿಯಮಾನುಸಾರ ಭರಿಸತಕ್ಕದ್ದು.

6. ಕಾಮಗಾರಿಗಳನ್ನು ಪ್ರಾರಂಭಿಸುವ ಪೂರ್ವದಲ್ಲಿ ಮತ್ತು ಪ್ರಗತಿಯ ಮಟ್ಟದಲ್ಲಿ ಹಾಗೂ ಕಾಮಗಾರಿಯ ಮುಕ್ತಾಯದ ನಂತದಲ್ಲಿ ಒಂದು ಕಾಮಗಾರಿಗೆ ಕನಿಷ್ಠ 10 ರಿಂದ 15 ಛಾಯಾಚಿತ್ರಗಳನ್ನು ಲಾಂಡ್ ಮಾರ್ಕ್ ಪ್ರಕಾರ ಮೇಲಿನ ಹಂತಗಳಲ್ಲಿ ತೆಗೆದು ಸಂಬಂಧಪಟ್ಟವರಿಂದ ದೃಢೀಕರಿಸಿ ಕಡತದಲ್ಲಿ ಇರಿಸತಕ್ಕದ್ದು.

7. ಕಾಮಗಾರಿಗಳ ಗುಣಮಟ್ಟವನ್ನು ಕಾಪಾಡುವುದು ಕಿರಿಯ ಅಭಿಯಂತರರು/ ಸಹಾಯಕ ಅಭಿಯಂತರರು / ಸಹಾಯಕ ಕಾರ್ಯಪಾಲಕ ಅಭಿಯಂತರರು ಜವಾಬ್ದಾರಿಯಾಗಿರುತ್ತಾರೆ. ಯಾವುದೇ ಲೋಪದೋಷಗಳು ಕಂಡುಬಂದಲ್ಲಿ ಸಂಬಂಧಪಟ್ಟ ಅಭಿಯಂತರರು ಹಾಗೂ ಪೌರಾಯುಕ್ತರು/ಮುಖ್ಯಾಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

8. ಕಾಮಗಾರಿ ಪ್ರಾರಂಭಕ್ಕೆ ಮುನ್ನ ಸ್ಥಳದ ಡಿಜಿಟಲ್ ಫೋಟೋ ದಿನಾಂಕ ಸಹಿತ / Latitude, Langitude ಸಹಿತ ತೆಗೆದು ಕಾಮಗಾರಿ ಈ ಹಿಂದೆ ಮಾಡಿಲ್ಲ ಎಂದು ದೃಢೀಕರಿಸುವುದು.

9. ಕಾಮಗಾರಿ ಪ್ರಗತಿ ವೇಳೆ ಕಾಮಗಾರಿ ಸ್ಥಳದ ಡಿಜಿಟಲ್ ಫೋಟೋ ದಿನಾಂಕ ಸಹಿತ / Latitude, Langitude ಸಹಿತ ತೆಗೆದು ಲಗತ್ತಿಸುವುದು.

10. ಕಾಮಗಾರಿ ಪೂರ್ಣಗೊಂಡ ಮೇಲೆ ಕಾಮಗಾರಿ ಸ್ಥಳದ ಡಿಜಿಟಲ್ ಫೋಟೋ ದಿನಾಂಕ ಸಹಿತ / Latitude, Langitude ಸಹಿತ ತೆಗೆದು ಲಗತ್ತಿಸುವುದು.

11. ಕಾಮಗಾರಿ ಬಿಲ್ ದೃಢಿಕರಿಸಿ ಸಹಿಮಾಡುವ ಸಂಬಂಧಿಸಿದ ಕಿರಿಯ ಅಭಿಯಂತರರು / ಸಹಾಯಕ ಅಭಿಯಂತರರು/ ಸಹಾಯಕ ಕಾರ್ಯಪಾಲಕ ಅಭಿಯಂತರರು/ ಕಾರ್ಯಪಾಲಕ ಅಭಿಯಂತರರರು ಲೋಪದೋಷಗಳಿಗೆ ಜವಾಬ್ದಾರರಾಗಿರುತ್ತಾರೆ.

12. ಟೆಂಡರ್ ಕರೆಯುವ / ಅನುಮೋದನೆಯಲ್ಲಿ ಆಗುವ ಲೋಪದೋಷಗಳಿಗೆ ಟೆಂಡರ್ ಕರೆಯುವ ಅನುಮೋದಿಸುವ ಸಂಬಂಧಿಸಿದ ಅಧಿಕಾರಿಗಳು ಜವಾಬ್ದಾರರಾಗಿರುತ್ತಾರೆ ಹಾಗೂ ಎಲ್ಲಾ ಕಾಮಗಾರಿಗಳ ತಾಂತ್ರಿಕ ದಾಖಲಾತಿಗಳ ಅನುಮೋದನೆಯನ್ನು ಈ ಕಛೇರಿಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಕಾರ್ಯಪಾಲಕ ಅಭಿಯಂತರರಿಂದ ಅನುಮೋದನೆ ಪಡೆಯತಕ್ಕದ್ದು.

13. ಸಮಂಜಸವಾದ ತಾಂತ್ರಿಕ ಅಂಶಗಳನ್ನು ಅಳವಡಿಸಿಕೊಳ್ಳುವುದು ಮತ್ತು ಅಳವಡಿಸಿಕೊಳ್ಳಲು ತತ್ಸಬಂಧ ಸಕಾರಣಗಳ Field Report ವರದಿ/ತಾಂತ್ರಿಕ ವರದಿ ಅಳವಡಿಸಿಕೊಳ್ಳುವುದು, ಲೋಪದೋಷಗಳಿಗೆ ಸಂಬಂಧಿಸಿದ ಅನುಮೋದನೆ ಪ್ರಾಧಿಕಾರವೇ ಹೊಣೆಗಾರರಾಗಿರುತ್ತಾರೆ.

14. ಕ್ರಿಯಾಯೋಜನೆಯ ಕೊಳವೆಬಾವಿ/ಬೋರ್‌ವೆಲ್ ಕೊರಿಯುವ ಕಾಮಗಾರಿಗಳಿಗೆ ಸ್ಥಳಗಳನ್ನು ಭೂ ವಿಜ್ಞಾನಿಗಳಿಂದ ಜಲ ಬಿಂದುಗಳನ್ನು ಗುರ್ತಿಸಿ, ನಂತರ ಬೋರ್‌ವೆಲ್ ಕೊರೆಯತಕ್ಕದು. ಹಾಗೂ ನೀವುಗಳು ಸಲ್ಲಿಸಿರುವ ಸ್ಥಳಗಳಲ್ಲಿ ಜಲಬಿಂದುಗಳು ಸಿಗದಿದ್ದಲ್ಲಿ, ಮತ್ತೊಂದು ಸ್ಥಳವನ್ನು ಗುರುತಿಸಿ ಸದರಿ ಸ್ಥಳಗಳಿಗೆ ಅನುಗುಣವಾಗಿ ಕ್ರಿಯಾಯೋಜನೆಯನ್ನು ಈ ಕಛೇರಿಯಿಂದ ಅನುಮೋದನೆ ಪಡೆಯತಕ್ಕದ್ದು.

15. ಬೋರ್‌ವೆಲ್ ಕೊರೆದ ನಂತರ ಸ್ಕ್ಯಾನಿಂಗ್ ಯಂತ್ರದಿಂದ ಹಾಳವನ್ನು ಮತ್ತು Casing Pipe ಅಳವನ್ನು ಛಾಯಾ ಚಿತ್ರದೊಂದಿಗೆ ದೃಢೀಕರಿಸತಕ್ಕದ್ದು.

16. ಕರ್ನಾಟಕ ಪುರಸಭಾ ಕಾಯ್ದೆ 1964ರ ನಿಯಮಗಳನ್ನು ಪಾಲಿಸುವುದು.

17. ಮೇಲ್ಕಂಡ ಕಾಮಗಾರಿ ಬೇರೆಯಾವುದೇ ಯೋಜನೆಯಡಿ ಪುನರಾವರ್ತನೆಯಾದಲ್ಲಿ ಸಂಬಂಧಿಸಿದ ಪೌರಾಯುಕ್ತರು/ಮುಖ್ಯಾಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.